## 35

# ಐದು ಸಾವಿರ ಜನರಿಗೆ ಊಟಮಾಡಿಸಿದ್ದು (14:13-21)

ಜನ ಸಮೂಹಕ್ಕೆ ಊಟ ಮಾಡಿಸಿದ್ದು ಯೇಸುವಿಗೆ ಯಾವುದೂ ಅಸಾಧ್ಯವಲ್ಲವೆಂಬುದನ್ನು ತೋರಿಸುತ್ತದೆ. ಆತನ ಶಿಷ್ಯರು ಈ ಸಂಗತಿಯ ಕುರಿತಾಗಿ ಈಗಾಗಲೇ ಸಾಕಷ್ಟು ಸಾಕ್ಷಿಗಳನ್ನು ನೋಡಿದ್ದರೂ, ಕೆಲವೊಂದು ಸಮಯದಲ್ಲಿ ಅವರು ಇನ್ನೂ ಸಂದೇಹಪಡುತ್ತಿದ್ದರು. ಅವರು ತಮ್ಮಿಂದ ಜಯಿಸಲಾಗದ ಅಡತಡೆ ಎಂದು ನೋಡಿದ್ದನ್ನು ಯೇಸು ದೇವರ ಬಲವನ್ನು ಮತ್ತು ಜನರ ಮೇಲಿರುವ ತನ್ನ ಪ್ರೀತಿಯನ್ನು ಪ್ರದರ್ಶಿಸಲು ತನಗಿರುವ ಅವಕಾಶವೆಂದು ನೋಡಿದನು.

### ಯೇಸು ಬಿಟ್ಟು ಹೋಗಿದ್ದು (14:13, 14)

**13ಯೇಸು ಅದನ್ನು ಕೇಳಿ ದೋಣಿಯನ್ನು ಹತ್ತಿ ಸ್ಥಳವನ್ನು ಬಿಟ್ಟು ಬಿಂಗಡವಾಗಿ ಅಡವಿಗೆ ಹೋದನು. ಇದನ್ನು ಕೇಳಿದ ಜನರು ಗುಂಪುಗುಂಪಾಗಿ ತಮ್ಮ ತಮ್ಮ ಊರುಗಳಿಂದ ಕಾಲು ನಡಿಗೆಯಿಂದ ಆತನ ಹಿಂದೆ ಬಂದರು. 14ಆತನು ಹೊರಗೆ ಬಂದು ಬಹು ಜನರ ಗುಂಪನ್ನು ಕಂಡು ಕನಿಕರ ಪಟ್ಟು ಅವರಲ್ಲಿದ್ದ ರೋಗಿಗಳನ್ನು ಸ್ವಸ್ಥಮಾಡಿದನು.**

**ವಚನ 13.** ಈ ಹಂತದಲ್ಲಿ, ಯೋಹಾನನ ಮರಣದ ಹಿನ್ನಲೆಯಿಂದ ಯೇಸುವಿನ ಸೇವೆಯವರೆಗೆ ಈ ಬದಲಾವಣೆಯನ್ನು ಮಾಡಲಾಗಿದೆ (14:3-12). ಘಟನಾವಳಿಗನುಗುಣವಾಗಿ ಈ ವಚನಗಳಿರುವ ಸಂಬಂಧ ಅಗೋಚರವಾಗಿದೆ. NASBಯ ಅನುವಾದದಲ್ಲಿ 13ನೇ ವಚನ, **ಯೇಸು ಅದನ್ನು ಕೇಳಿ** ಎಂದು ಪ್ರಾರಭವಾಗುತ್ತದೆ. "ಯೋಹಾನನ ಕುರಿತು" ಎರಡು ಪದಗಳು ಗ್ರೀಕ್ ಪಠ್ಯದಲ್ಲಿ ಕಂಡುಬರುವದಿಲ್ಲ, ಆದರೆ ಅನುವಾದಕರು ಆಂಗ್ಲದಲ್ಲಿ ಇವುಗಳನ್ನು ಸೇರಿಸಿದ್ದಾರೆ. ಒಂದು ವೇಳೆ ಈ ಸೇರಿಸುವಿಕೆ ಸರಿಯಾಗಿದ್ದಲ್ಲಿ, ಉಳಿದ ಅಧ್ಯಾಯದ ಉಳಿದ ಭಾಗವು ಸಹ ಹಿಂದಿನ ಘಟನೆಯ ಮೇಲೆ ಬೆಳಕನ್ನು ಚೆಲ್ಲುವಂತದ್ದಾಗಿದೆ. ಯೋಹಾನನ ಶಿರಚ್ಛೇದನ ಹೆರೋದನು ಯೇಸುವನ್ನು ವಿಚಾರಿಸುವ ಮೊದಲು ನಡೆದದ್ದು (14:1, 2), ಯೇಸುವಿನ ನಿರ್ಗಮನ ಎದೆಗುಂದಿಸುವ ಯೋಹಾನನ ಮರಣದ ಕುರಿತಾಗಿ ನೇರವಾದ ಪ್ರತಿಕ್ರಿಯೆಯಾಗಿರಬಹುದು.

ಮತ್ತಾಯನು ಯೇಸು ಯೋಹಾನ ಮರಣದ ಸುದ್ದಿಯನ್ನು ಕೇಳಿದನು ಎಂದು ಉಲ್ಲೇಖಿಸಿದ್ದು ಹೆರೋದನು ಯೇಸುವನ್ನು ಯೋಹಾನನು ತಿರುಗಿ ಎದ್ದು ಬಂದಿದ್ದಾನೆ ಎಂದು ನಂಬಿದ್ದರೊಂದಿಗೆ ಸಂಬಂಧವಿರುವ ಸಾಧ್ಯತೆಯಿದೆ (14:1, 2). ಈ ಮೂಲ ಪಾಠವನ್ನು ಅರ್ಥಮಾಡಿಕೊಳ್ಳುವದರಿಂದ ಹಿಂದಿನ ಘಟನೆಯ ಮೇಲೆ ಬೆಳಕು ಚೆಲ್ಲುವ ಉಪವಾಕ್ಯವನ್ನು 14:3-12 ಕ್ಕೆ ಮಿತಿಗೊಳಿಸುತ್ತದೆ. ಇದು ಯೇಸುವಿನ ನಿರ್ಗಮನ ತನ್ನ ಕುರಿತಾದ ಹೆರೋದನ ಹೇಳಿಕೆಗೆ ಪ್ರತಿಕ್ರಿಯೆಯಾಗಿರಬಹುದೆಂದು ಸಹ ಸೂಚಿಸುತ್ತದೆ. ಮಾರ್ಕ 6 ಮತ್ತು ಲೂಕ 9ನ್ನು ಹೋಲಿಸುವಾಗ ಈ ಘಟನಾವಳಿಗಳ ಅರ್ಥೈಸುವಿಕೆ ಸರಿಯಾಗಿವೆಯೆಂದು ಸೂಚಿಸುತ್ತವೆ. ಇದರೊಟ್ಟಿಗೆ, ಮಾರ್ಕ ಮತ್ತು ಲೂಕ ಯೇಸುವಿನ ನಿರ್ಗಮನಕ್ಕೆ ಇನ್ನೊಂದು ಅಂಶವನ್ನು ಒದಗಿಸುತ್ತಾರೆ: ಹನ್ನೆರಡು ಜನರು ನಿಯಮಿತ ಸೇವೆಯನ್ನು ಮಾಡಿ ನಿಯೋಗ

ದಿಂದ ಹಿಂತಿರುಗಿದ್ದು ಮತ್ತು ಅವರಿಗಿರುವ ವಿಶ್ರಾಂತಿಯ ಅಗತ್ಯತೆ ಎಂದು ಹೇಳುತ್ತಾರೆ (ಮಾರ್ಕ 6:30, 31; ಲೂಕ 9:10).

ಹಿಂದಿನ ಅಧ್ಯಾಯದಲ್ಲಿ, ಯೇಸು ತನ್ನ ಸ್ವಂತ ಊರಾದ ನಜರೇತಿನಲ್ಲಿ ಸೇವೆ ಮಾಡುತ್ತಿದ್ದನು (13:54-58). ಆತನು ಗಲಿಲಾಯ ಸಮುದ್ರದ ದಂಡೆಗೆ ತನ್ನ ಸೇವೆ ಯನ್ನು ಮಾಡಲು ಹಿಂತಿರುಗಿದ್ದನು. ತನ್ನ ಕುರಿತಾಗಿ ಹೆರೋದನ ದೃಷ್ಟಿಕೋನವನ್ನು ತಿಳಿದ ನಂತರ, **ಯೇಸು ಅಲ್ಲಿಂದ ಪ್ರತ್ಯಕ್ಷವಾಗಿರಲು ಸ್ವತ ಆತನೇ ದೋಣಿಯನ್ನು ಹತ್ತಿ ಸ್ಥಳವನ್ನು ಬಿಟ್ಟು ಹೋದನು.** "ತನ್ನಷ್ಟಕ್ಕೆ" ಎಂಬ ವಾಕ್ಯಭಾಗವು ಆತನ ಜೊತೆಗಿದ್ದ ಶಿಷ್ಯರನ್ನು ಬಿಟ್ಟು ಎಂಬುದಾಗಿ ಅಲ್ಲ (ಮಾರ್ಕ 6:31, 32; ಲೂಕ 9:10). "ಏಕಾಂತ ಸ್ಥಳ" (*erēmon topon*) ಇದು ಗ್ರೀಕ್ ಶಬ್ದದ ಅನುವಾದವಾಗಿದೆ. ಯೇಸು ಜನರು ವಾಸಿಸದೇ ಇರುವ ಸ್ಥಳಕ್ಕೆ ಹೋದನು, ಆದರೆ ಅದು "ಮರುಭೂಮಿಯಲ್ಲ" ಅಲ್ಲಿರುವ ಸಮೃದ್ಧಿಯಾದ ಹುಲ್ಲಿನ ಉಲ್ಲೇಖ ಇದನ್ನು ಸೂಚಿಸುತ್ತದೆ (14:19; ಮಾರ್ಕ 6:39).

ಲೂಕನ ಪ್ರಕಾರ, ಯೇಸು ಮತ್ತು ಆತನ ಶಿಷ್ಯರು ಬೆತ್ಸಾಯಿದದ ಕಡೆಗೆ ಪ್ರಯಾಣಿಸಿದರು (ಲೂಕ 9:10). ಹೇಗಿದ್ದರೂ ಸಹ, ಮಾರ್ಕನ ಸುವಾರ್ತೆಯಲ್ಲಿ, ಆಶ್ಚರ್ಯಕರವಾದ ರೀತಿ ಯಲ್ಲಿ ಊಟಮಾಡಿಸಿದ ಮೇಲೆ ಯೇಸು ತನ್ನ ಶಿಷ್ಯರನ್ನು "ಬೇತ್ಸಾಯಿದ ಆಚೆ ದಡಕ್ಕೆ" ಕಳುಹಿಸಿದನು (ಮಾರ್ಕ 6:45). ಬಹುಶಃ ಯೇಸುವಿನ ಸಮಯದಲ್ಲಿ ಒಂದಕ್ಕಿಂತ ಹೆಚ್ಚು ಪಟ್ಟಣಗಳು "ಮೀನುಗಾರಿಕೆಯ ತವರು" ಅಥವಾ "ಮೀನುಗಾರರ ಮನೆ" ಎಂದು ಹೆಸರಾಗಿರಬಹುದು. ಲೂಕನ ಸುವಾರ್ತೆಯಲ್ಲಿ ಉಲ್ಲೇಖಿಸಿರುವ ಬೆತ್ಸಾಯಿದ ಸರೋವರವು ಈಶಾನ್ಯ ದಿಕ್ಕಿನಲ್ಲಿ ಸ್ಥಾಪಿತವಾಗಿರಬಹುದು. ಅದೇ ಸಮಯದಲ್ಲಿ ಮಾರ್ಕನ ಸುವಾರ್ತೆಯಲ್ಲಿ ಉಲ್ಲೇಖಿಸಿರುವ ವಾಯುವ್ಯ ದಿಕ್ಕಿನಲ್ಲಿ ಕಪೆರ್ನೌಮಿನ ಸಮೀಪದಲ್ಲಿ ಸ್ಥಾಪಿತವಾಗಿರಬಹುದು (ಯೋಹಾನ 6:17). Josephusನು ಉತ್ತರದ ದಂಡೆಯಲ್ಲಿರುವ ಬೇತ್ಸಾಯಿದವನ್ನು (Julias) ಎಂದು ಗುರುತಿಸುತ್ತಾನೆ. ಯೋರ್ದಾನ ಹೊಳೆ ಸರೋವರವನ್ನು ಸೇರುವ ಉತ್ತರಕ್ಕೆ ಇದೆ.[1]

ಈ ಬೇತ್ಸಾಯಿದವು ಚತುರಧಿಪತಿ ಫಿಲಿಪ್ಪನ ಆಳ್ವಿಕೆಗೆ ಒಳಪಟ್ಟಿತ್ತು ಮತ್ತು ಹೆರೋದ ನಿಂದ ಸ್ವಲ್ಪ ಮಟ್ಟಿಗೆ ರಕ್ಷಣೆ ದೊರೆಯುತಿತ್ತು.[2] ಅದಕ್ಕಾಗಿ ಯೇಸು ಉದ್ದೇಶ ಪೂರ್ವಕವಾಗಿ ತನ್ನನ್ನು ಅಪಾಯದಿಂದ ಬೇರ್ಪಡಿಸಿರಬಹುದು, ಅವನು ಇದನ್ನು ಭಯದಿಂದಾಗಿ ಮಾಡಲಿಲ್ಲ. ಈ ಅಧ್ಯಾಯದ ಕೊನೆಯಲ್ಲಿ, ಗಲಿಲಾಯದಲ್ಲಿರುವ ಗೆನಜರೇತಿಗೆ ಆತನು ಹಿಂತಿರುಗಿದನು (14:34), ಅದು ಹೆರೋದನ ಆದಿನದಲ್ಲಿತ್ತು.

ಯೇಸು ತನ್ನ ಸೇವೆಯ ಕುರಿತಾಗಿ ಬಹಳ ಜಾಗ್ರತನಾಗಿದ್ದನು, ತಾನು ತಕ್ಕ ಸಮಯದಲ್ಲಿ ಎಲ್ಲವನ್ನೂ ನೇರವೇರಿಸುತ್ತೇನೆ ಎಂಬುದನ್ನು ಬಲ್ಲವನಾಗಿದ್ದನು. ಇನ್ನೊಂದು ಸಂದರ್ಭದಲ್ಲಿ, ಯೇಸುವಿಗೆ ಕೆಲವು ಫರಿಸಾಯರು ಹೆರೋದನು ನಿನ್ನನ್ನು ಕೊಲ್ಲಲು ಬಯಸುತ್ತಾನೆ ಎಂದು ಹೇಳಿದರು (ಲೂಕ 13:31). ಆತನು ರಾಜನಿಗೆ - "ನೀವು ಹೋಗಿ - ಇಗೋ ನಾನು ಈ ಹೊತ್ತು ನಾಳೆ ದೆವ್ವಗಳನ್ನು ಬಿಡಿಸುತ್ತಾ ರೋಗಗಳನ್ನು ವಾಸಿಮಾಡುತ್ತಾ, ಇದ್ದು ಮೂರನೆಯ ದಿನದಲ್ಲಿ ನನ್ನ ಗುರಿಯನ್ನು ಮುಟ್ಟುವೆನು" ಎಂದು ಹೇಳಿ ಕಳುಹಿಸಿದನು (ಲೂಕ 13:32). ಇದು ಸಂಭವಿಸಲಿಕ್ಕಿರುವ ಆತನ ಮರಣದ ಸ್ಪಷ್ಟವಾದ ಪ್ರವಾದನೆಯಾಗಿತ್ತು, ಅದು ಯೆರೂಸಲೇಮಿನಲ್ಲಿ ನಡೆಯಲಿಕ್ಕಿತ್ತು (ಲೂಕ 13:33).

**ಜನರು** ಯೇಸು ದೋಣಿಯಲ್ಲಿ ಸರೋವರವನ್ನು ದಾಟಿಹೋಗುತ್ತಿದ್ದಾನೆಂದು ಅರಿತು, ಅವರು **ತಮ್ಮ ತಮ್ಮ ಊರುಗಳಿಂದ ಕಾಲು ನಡಿಗೆಯಿಂದ ಆತನ ಹಿಂದೆ ಬಂದರು.** "ಅವರು ರೋಗಿಗಳಲ್ಲಿ ಆತನು ನಡಿಸಿದ ಸೂಚಕಕಾರ್ಯಗಳನ್ನು ನೋಡಿದ್ದರಿಂದ ಆತನ ಹಿಂದೆ ಹೋಗುತ್ತಿದ್ದರು" (ಯೋಹಾನ 6:2). ಈ ಜನರು ಯೇಸುವಿನ ಬಳಿಗೆ ಹೋಗಲು ಯಾವುದೇ ವಿಧದ ಅಡತಡೆಗಳನ್ನು ಜಯಿಸಲು ಸಿದ್ಧರಿದ್ದರು.

**ವಚನ 14.** ದೋಣಿಯು ದಡಕ್ಕೆ ಬಂದ ನಂತರ, ಯೇಸು **ದಡದ ಮೇಲೆ** ಬಂದು ದೊಡ್ಡ

**ಜನರ ಗುಂಪನ್ನು** ಎದುರಿಸಿದನು. ಕನಿಷ್ಟ ಕಾಲುನಡೆಗೆಯಿಂದ ಬಂದ ಕೆಲವು ಜನರು ಆತನು ಬರುವದಕ್ಕಿಂತ ಮುಂಚಿತವಾಗಿ ಮುಟ್ಟಬೇಕಾದ ಸ್ಥಳಕ್ಕೆ ಬಂದಿದ್ದರು. ಕರ್ತನು ಅವರನ್ನು ನೋಡಿ ಕನಿಕರಪಟ್ಟನು (ನೋಡಿರಿ 9:36; 15:32; 20:34). ಆತನ ಹೃದಯ ಅವರಿಗಾಗಿ ಮರುಗಿತು ಯಾಕೆಂದರೆ ಅವರು "ಕುರುಬನಿಲ್ಲದ ಕುರಿಗಳಂತೆ" ಇದ್ದರು (ಮಾರ್ಕ 6:34). ಆತನ ಅನುಕಂಪದ ಪರಿಣಾಮವಾಗಿ, ಆತನು ರೋಗದಲ್ಲಿರುವವರನ್ನು ಸ್ವಸ್ಥಮಾಡಿದನು.

## ಯೇಸು ಜನಸಮೂಹಕ್ಕೆ ಊಟ ಮಾಡಿಸಿದ್ದು (14:15-21)

**15ಸಂಜೆಯಾದಾಗ ಶಿಷ್ಯರು ಆತನ ಬಳಿಗೆ ಬಂದು - ಇದು ಅಡವಿ, ಈಗ ಹೊತ್ತು ಹೋಯಿತು; ಈ ಗುಂಪಿಗೆ ಅಪ್ಪಣೆ ಕೊಡು; ಅವರು ಹಳ್ಳಿ ಪಳ್ಳಿಗಳಿಗೆ ಹೋಗಿ ಆಹಾರಪದಾರ್ಥಗಳನ್ನು ಕೊಂಡುಕೊಳ್ಳಲಿ ಎಂದು ಹೇಳಲಾಗಿ 16ಯೇಸು - ಅವರು ಹೋಗುವದು ಅಗತ್ಯವಿಲ್ಲ; ನೀವೇ ಅವರಿಗೆ ಊಟಕ್ಕೆ ಕೊಡಿರಿ ಅಂದನು. 17ಅದಕ್ಕವರು - ನಮಗೆ ಇಲ್ಲಿ ಐದು ರೊಟ್ಟಿ ಎರಡು ಮೀನು ಹೊರತು ಮತ್ತೇನೂ ಇಲ್ಲ ಅನ್ನಲಾಗಿ 18ಆತನು - ಅವುಗಳನ್ನು ಇಲ್ಲಿ ನನಗೆ ತಂದುಕೊಡಿರಿ ಅಂದನು. 19ಮತ್ತು ಜನರಿಗೆ ಹುಲ್ಲಿನ ಮೇಲೆ ಕೂತುಕೊಳ್ಳುವದಕ್ಕೆ ಹೇಳಿ ಆ ಐದು ರೊಟ್ಟಿ ಎರಡು ಮೀನುಗಳನ್ನು ತಕ್ಕೊಂಡು ಆಕಾಶದ ಕಡೆಗೆ ನೋಡಿ ದೇವರ ಸ್ತೋತ್ರ ಮಾಡಿ ರೊಟ್ಟಿಗಳನ್ನು ಮುರಿದು ಶಿಷ್ಯರ ಕೈಗೆ ಕೊಟ್ಟನು; ಶಿಷ್ಯರು ಜನರ ಗುಂಪಿಗೆ ಕೊಟ್ಟರು. 20ಅವರೆಲ್ಲರೂ ಊಟಮಾಡಿ ತೃಪ್ತರಾದರು. ಮಿಕ್ಕ ತುಂಡುಗಳನ್ನು ಕೂಡಿಸಲಾಗಿ ಹನ್ನೆರಡು ಪುಟ್ಟಿ ತುಂಬಿತು. 21ಊಟಮಾಡಿದವರು ಹೆಂಗಸರೂ ಮಕ್ಕಳೂ ಅಲ್ಲದೆ ಗಂಡಸರೇ ಹೆಚ್ಚು ಕಡಿಮೆ ಐದು ಸಾವಿರ ಮಂದಿ.**

ನಾಲ್ಕು ಸುವಾರ್ತೆಗಳಲ್ಲಿ ದಾಖಲಿಸಲ್ಪಟ್ಟ ಏಕೈಕ ಅದ್ಭುತ ಕಾರ್ಯವೆಂದರೆ ಐದು ರೊಟ್ಟಿ ಎರಡು ಮೀನಿನಿಂದ ಐದು ಸಾವಿರ ಗಂಡಸರಿಗೆ ಊಟಮಾಡಿಸಿದ್ದು (14:15-21; ಮಾರ್ಕ 6:35-44; ಲೂಕ 9:12-17; ಯೋಹಾನ 6:5-14). ಇದು ಸುವಾರ್ತೆಯ ಲೇಖಕರ ವಿಶಿಷ್ಟತೆಯನ್ನು ಸೂಚಿಸುತ್ತದೆ. ನಾಲ್ಕು ಸಾವಿರ ಜನರಿಗೆ ಊಟಮಾಡಿಸಿದ್ದು ಮತ್ತಾಯ ಮತ್ತು ಮಾರ್ಕನ ಸುವಾರ್ತೆಯಲ್ಲಿ ಮಾತ್ರ ದಾಖಲಿಸಲಾಗಿದೆ (15:32-39; ಮಾರ್ಕ 8:1-9).

ಯೆಹೂದಿ ಸಂಪ್ರದಾಯದ ಪ್ರಕಾರ ಮೆಸ್ಸೀಯನ ಕಾಲದಲ್ಲಿ ಜನರಿಗೆ ಅದ್ಭುತವಾದ ರೊಟ್ಟಿಯನ್ನು ಊಣಬಡಿಸುವದನ್ನು ನಿರೀಕ್ಷಿಸುವದಾಗಿದೆ.[3] ರೊಟ್ಟಿಯನ್ನು ದ್ವಿಗುಣಗೊಳಿಸುವದರ ಮೂಲಕ ಯೇಸು ಮೋಶೆಯ ಮೂಲಕ ಮಾತನಾಡಿದ ಪ್ರವಾದಿ ಈತನೇ ಆಗಿದ್ದಾನೆ ಎಂಬುದನ್ನು ಪ್ರದರ್ಶಿಸಿದನು (ಧರ್ಮೋಪದೇಶಕಾಂಡ 18:15, 18; ಯೋಹಾನ 6:14). ಮೋಶೆಯ ದಿನಗಳಲ್ಲಿ, ದೇವರು ತನ್ನ ಜನರಿಗೆ ಪರಲೋಕದ ರೊಟ್ಟಿ, ಮನ್ನ ನೀಡುವದರ ಮೂಲಕ ಊಟ ಬಡಿಸಿದನು (ವಿಮೋಚನಕಾಂಡ 16:1-36).[4] ಯೇಸು ಜನಸಮೂಹಕ್ಕೆ ತಿನ್ನಲು ದೈಹಿಕ ರೊಟ್ಟಿಯನ್ನು ಮಾತ್ರ ನೀಡಲಿಲ್ಲ, ಆತನು ಪರಲೋಕದಿಂದ ಇಳಿದುಬಂದು ಆತ್ಮೀಕವಾದ ಜೀವಕರವಾದ ರೊಟ್ಟಿಯನ್ನು ಸಹ ನೀಡಿದನು. ಯೋಹಾನ ಸುವಾರ್ತೆಯಲ್ಲಿ ಯೇಸುವಿನ ಉಪದೇಶ ಈ ಮುಖ್ಯ ವಿಷಯವನ್ನು ಅಭಿವೃದ್ಧಿಪಡಿಸಿದೆ (ಯೋಹಾನ 6:26-59).

ರೊಟ್ಟಿ ಮತ್ತು ಮೀನು ಆದಿ ಸಭೆಯ ಕಲಾತ್ಮಕ ಕಾರ್ಯಗಳಲ್ಲಿ ಮೇಲಿಂದ ಮೇಲೆ ಕಾಣಿಸಿಕೊಳ್ಳುತ್ತದೆ. ಆ ಕ್ರೈಸ್ತರು ಯೇಸುವಿನ ಅದ್ಭುತ ಕಾರ್ಯಗಳಲ್ಲಿ ಆಸಕ್ತಿಯುಳ್ಳವರಾಗಿದ್ದರು ಯಾಕಂದರೆ ದೇವರು ಅಡವಿಯಲ್ಲಿ ತನ್ನ ಜನರಿಗೆ ಮನ್ನದಿಂದ ಊಟಬಡಿಸಿದ್ದನು ಅವರು ಕೊನೆಯ ದಿನಗಳಲ್ಲಿ ಮೆಸ್ಸೀಯನ ಔತಣವನ್ನು ಎದುರು ನೋಡುವವರಾಗಿದ್ದರು (ಪ್ರಕಟಣೆ 2:17).[5]

**ವಚನ 15.** ತಾನು ಮೊದಲೇ ಯೋಜಿಸಿದಂತೆ ತನ್ನ ಶಿಷ್ಯರೊಂದಿಗೆ ವಿಶ್ರಾಂತಿಯನ್ನು ತೆಗೆದುಕೊಳ್ಳುವದನ್ನು ಬಿಟ್ಟು, ಯೇಸು ರೋಗಿಗಳನ್ನು ಸ್ವಸ್ಥಮಾಡುವದರಲ್ಲಿ ಮತ್ತು ಜನಸಮೂಹಕ್ಕೆ ಬೋಧಿಸುವದರಲ್ಲಿ ತನ್ನ ದಿನವನ್ನು ಕಳೆದನು (14:14; ಮಾರ್ಕ 6:34). **ಸಂಜೆಯಾದಾಗ ಶಿಷ್ಯರು** ಆತನು ಜನರನ್ನು ಕಳುಹಿಸಿಬಿಡಬೇಕೆಂದು ಬಯಸಿದ್ದರು. ಅವರು ಸೇರಿಬಂದ ಸ್ಥಳವು **ಅಡವಿ** ಪ್ರದೇಶವಾಗಿತ್ತು ಅದು ಜನರು ವಾಸಿಸುವ ಸ್ಥಳವಾಗಿರಲಿಲ್ಲ (ನೋಡಿರಿ ವ್ಯಾಖ್ಯಾನ 14:13). ಮುಂದೆ, ಅದು **ಸಂಜೆ** ಊಟದ ಸಮಯವನ್ನು ಮೀರಿತ್ತು. **ಗುಂಪು** ಚದುರಿಹೋಗಿ ಮತ್ತು **ಹಳ್ಳಿ ಹಳ್ಳಿಗೆ ಹೋಗಿ ಆಹಾರಪದಾರ್ಥಗಳನ್ನು ಕೊಂಡುಕೊಳ್ಳಲಿ** ಶಿಷ್ಯರಿಗೆ ಜನರ ಕುರಿತಾಗಿರುವ ಕಳಕಳಿ ಸಮಂಜಸವಾಗಿತ್ತು. ಜನಸಮೂಹವು ಯಾವುದೇ ಯೋಜನೆಯಿಲ್ಲದೇ ಯೇಸುವನ್ನು ಹಿಂಬಾಲಿಸಿತ್ತು ಮತ್ತು ತಮ್ಮೊಟ್ಟಿಗೆ ಹೆಚ್ಚು ಆಹಾರವನ್ನು ತಂದಿರಲಿಲ್ಲ. ಈ ಸಮಯದಲ್ಲಿ ಅವರಿಗೆ ಹಸಿವೆಯಾಗಿರಬಹುದು. ಶಿಷ್ಯರು ಸಹ ಹಸಿದಿದ್ದರು ಎನ್ನುವದರಲ್ಲಿ ಸಂಶಯವಿಲ್ಲ.

**ವಚನ 16.** ಯೇಸು ಶಿಷ್ಯರಿಗೆ, **ಜನರು ಹೋಗುವದು ಅಗತ್ಯವಿಲ್ಲ; ನೀವೇ ಅವರಿಗೆ ಊಟಕ್ಕೆ ಕೊಡಿರಿ ಅನ್ನುವಾಗ ಅವರು ಎಷ್ಟು ಗಾಬರಿಯಾಗಿರಬಹುದು.** ಯೋಹಾನ ಸುವಾರ್ತೆಯ ಪ್ರಕಾರ ಯೇಸು ಫಿಲಿಪ್ಪಿನಿಗೆ, "ಇವರ ಊಟಕ್ಕೆ ನಾವು ಎಲ್ಲಿಂದ ರೊಟ್ಟಿ ಕೊಂಡು ತರೋಣ?" ಎಂದು ಕೇಳಿದನು (ಯೋಹಾನ 6:5). ವಿವರಣಾತ್ಮಕ ಟಿಪ್ಪಣಿ ಸೇರಿ ಸಲ್ಪಟ್ಟಿದೆ: "ತಾನು ಮಾಡಬೇಕೆಂದಿದ್ದನ್ನು ತನಗೆ ತಿಳಿದಿದ್ದರೂ ಅವನನ್ನು ಪರೀಕ್ಷಿಸುವದಕ್ಕೆ ಈ ಮಾತನ್ನು ಹೇಳಿದನು" (ಯೋಹಾನ 6:6). ಫಿಲಿಪ್ಪನು ಬಹುಶಃ ಜನ ಸಮೂಹದಲ್ಲಿದ್ದ ಜನರನ್ನು ಅಂದಾಜು ಮಾಡಿರಬಹುದು ಆದುದರಿಂದ ಎಲ್ಲರಿಗೂ ಸಾಕಾಗುವಷ್ಟು ರೊಟ್ಟಿಯನ್ನು ನೀಡಲು ನಮ್ಮ ಹತ್ತಿರ ಬೇಕಾದಷ್ಟು ಹಣ ಇಲ್ಲ ಎಂದು ಹೇಳಿದನು (ಯೋಹಾನ 6:7). ಮಾರ್ಕ 6:37ರ ಪ್ರಕಾರ ಶಿಷ್ಯರು ಯೇಸುವಿಗೆ, "ನಾವು ಹೋಗಿ ಇನ್ನೂರು ಹಣಕ್ಕೆ ರೊಟ್ಟಿಯನ್ನು ಕೊಂಡುಕೊಂಡು ಅವರಿಗೆ ಊಟಕ್ಕೆ ಕೊಡಬೇಕೋ?" ಎಂದು ಕೇಳಿದರು. ಆಳಿಗೆ ದಿನಕ್ಕೆ ಒಂದು ಪಾವಲಿಯಂತೆ ಕೂಲಿ ಗೊತ್ತು ಮಾಡುತ್ತಿದ್ದರು (20:2), ಇನ್ನೂರು ಹಣವೆಂದರೆ ಕೆಲಸಗಾರರಿಗೆ ಕೊಡುವ ವರ್ಷದ 2/3 ರಷ್ಟು ಸಂಬಳಕ್ಕೆ ಸಮವಾಗುತ್ತದೆ.

ಆಗ ಫಿಲಿಪ್ಪಿನ ಕಳಕಳಿ ನ್ಯಾಯಸಮ್ಮತವಾಗಿತ್ತು ಮತ್ತು ಆತನಲ್ಲಿರುವ ಆತಂಕವನ್ನು ತಿಳಿದುಕೊಳ್ಳಬಹುದಾಗಿತ್ತು, ಆತನಿಗೆ ಯೇಸುವಿನಲ್ಲಿರುವ ನಂಬಿಕೆಯ ಕೊರತೆ ಕ್ಷಮಿಸಲಾಧ್ಯವಾಗಿತ್ತು. ಯೇಸುವಿಗೆ ಅಸಾಧ್ಯವಾದದ್ದು ಒಂದು ಇರಲಿಲ್ಲ. ಆತನ ಶಿಷ್ಯರು ಈ ವಿಷಯದಲ್ಲಿ ಸಾಕಾಷ್ಟು ಸಾಕ್ಷಿಗಳನ್ನು ಈಗಾಗಲೇ ನೋಡಿದಾಗ್ಯೂ ಏನು, ಯೇಸು ಆ ಸದಾವಕಾಶವನ್ನು ದೇವರ ಬಲವನ್ನು ಮತ್ತು ಆತನ ಪ್ರೀತಿ ಜನರಿಗಾಗಿ ಇರುವದನ್ನು ತೋರಿಸುವದಕ್ಕಾಗಿ ಉಪಯೋಗಿಸಿಕೊಂಡನು.

**ವಚನಗಳು 17, 18.** ಯೇಸು ಅಪೊಸ್ತಲರಿಗೆ, "ನಿಮ್ಮಲ್ಲಿ ಎಷ್ಟು ರೊಟ್ಟಿಗಳಿವೆ? ಹೋಗಿ ನೋಡಿಕೊಂಡು ಬನ್ನಿ ಅಂದನು" (ಮಾರ್ಕ 6:38). **ಅವರು ಆತನಿಗೆ** ಅವರಲ್ಲಿ **ಐದು ರೊಟ್ಟಿ ಎರಡು ಮೀನುಗಳು** ಸಿಕ್ಕಿವೆ ಎಂದು ಹೇಳಿದರು. ಯೇಸು, **ಇಲ್ಲಿ ನನಗೆ ತಂದುಕೊಡಿರಿ** ಅಂದನು. "ಪೇತ್ರನ ತಮ್ಮನಾದ ಆಂದ್ರೆಯನು" ಅದನ್ನು ಯೇಸುವಿನ ಬಳಿಗೆ ತಂದನು, ಹುಡುಗನ ಬಳಿ ಇದ್ದ "ಐದು ರೊಟ್ಟಿ ಮತ್ತು ಎರಡು ಮೀನುಗಳನ್ನು" ತಂದಿದ್ದನು. ಏನೇ ಆದರೂ, ಫಿಲಿಪ್ಪನೊಂದಿಗೆ ಆತನು ಸೇರಿ, "ಇಷ್ಟು ಜನರಿಗೆ ಅವು ಯಾತಕ್ಕಾದವು?" ಎಂದು ಸಂದೇಹದಿಂದ ಕೇಳಿದನು (ಯೋಹಾನ 6:8, 9).

ರೊಟ್ಟಿ ಮತ್ತು ಮೀನು ಗಲಿಲಾಯ ಬಡಜನರ ಮುಖ್ಯವಾದ ಆಹಾರವಾಗಿತ್ತು (7:9, 10); ಇವುಗಳನ್ನು ಅವರು ಬೆಳಗಿನ ತಿಂಡಿಗೆ ಸಹ ತಿನ್ನುತ್ತಿದ್ದರು (ಯೋಹಾನ 21:9-13). ಇಂತಹ ಸಮಯದಲ್ಲಿ ಹುಡುಗನು ತಂದಿದ್ದ ರೊಟ್ಟಿ ಜವೆಗೋದಿಯ ರೊಟ್ಟಿಯಾಗಿತ್ತು (ಯೋಹಾನ 6:9). ಜವೆ ಗೋಧಿಯನ್ನು ಗೋದಿಗಿಂತ ಮುಂಚಿತವಾಗಿ ವಸಂತ ಋತುವಿನಲ್ಲಿ ಸುಗ್ಗಿ

ಮಾಡುತ್ತಾರೆ (ರೂತಳು 2:23). ಇದು ಗೋಧಿಗಿಂತ ಕಡಿಮೆ ಬೆಲೆಗೆ ದೊರೆಯುವ ಒರಟಾದ ಕಾಳಾಗಿರುತ್ತದೆ (ಪ್ರಕಟಣೆ 6:6). ಆದುದರಿಂದ ಇದನ್ನು ಹೆಚ್ಚಾಗಿ ಅತೀ ಬಡವರಾದ ಜನರು ಊಟಮಾಡುತ್ತಾರೆ. ಈ "ರೊಟ್ಟಿಗಳು" ದುಂಡಾಗಿರುವ ಚಿಕ್ಕ ತುಂಡುಗಳಾಗಿರಬಹುದು ಮತ್ತು ಮೀನುಗಳು ಬಹುಶಃ ಗಲಿಲಾಯ ಸಮುದ್ರದಲ್ಲಿ ಹಿಡಿದಿರುವ ಚಿಕ್ಕ ವಿಧದ ಮೀನುಗಳಾಗಿರಬಹುದು. ಅಂಶಸೂಚಿ ಸುವಾರ್ತೆಗಳಲ್ಲಿ "ಮೀನು ದುಂಡಾಗಿ ಆಕಾರ ಹೊಂದಿರುತ್ತವೆ." ಮೀನುಗಳು ಸಹಜವಾಗಿ ಚಿಕ್ಕದ್ದಾಗಿದ್ದು ಗಲಿಲಾಯ ಸಮುದ್ರದಲ್ಲಿ ಹಿಡಿದು ತೆಗೆದುಕೊಂಡು ಬಂದಿರುತ್ತಾರೆ. ಎಲ್ಲಾ ಸಮನಾರ್ಥಕೊಡುವ ಸುವಾರ್ತೆಗಳು "ಮೀನು" (*ichthus*) ಎಂಬ ಸಾಮಾನ್ಯ ಪದವನ್ನು ಉಪಯೋಗಿಸಲಾಗಿದೆ. ಯೋಹಾನನು ಚಿಕ್ಕದಾದ ಶಬ್ದ *opsarion* ಎಂಬುದನ್ನು ಉಪಯೋಗಿಸಿದ್ದಾನೆ. ಮೀನುಗಳನ್ನು ರಕ್ಷಿಸಲು ಸಾಮಾನ್ಯವಾಗಿ ಉಪ್ಪನ್ನು ಹಚ್ಚಿಡುತ್ತಾರೆ.

ಯೇಸು ಮಾಡಿರುವ ಅದ್ಭುತದಲ್ಲಿ ಅಚ್ಚುಮೆಚ್ಚಿನ ವ್ಯಂಜನಗಳನ್ನು ಒದಗಿಸಲಿಲ್ಲ, ಯಾವುದೇ ಪರದೇಶದ ಹಣ್ಣುಗಳಿರಲಿಲ್ಲ, ದ್ರಾಕ್ಷಾರಸವಿರಲಿಲ್ಲ. ಆತನು ನೀಡಿದ ಊಟ ದೇವರ ಒದಗಿಸುವಿಕೆಗೆ ಒತ್ತು ನೀಡುತ್ತದೆ. ಊಟವು, ಹತಾಶೆಯ ಸನ್ನಿವೇಶದಲ್ಲೂ ನಮ್ಮ ಮೂಲ ಅವಶ್ಯಕತೆಗಳಿಗಾಗಿ ಆತನ ಒದಗಿಸುವಿಕೆಯ ಘೋಷಣೆಯ ಮೇಲೆ ಆತುಕೊಳ್ಳುವದಕ್ಕೆ ಒತ್ತು ನೀಡುತ್ತಾನೆ (ನೋಡಿರಿ 6:25-34). ಸಂಗತಿಗಳು ಯೇಸು ಮೆಸ್ಸೀಯನು, ಅರಣ್ಯದಲ್ಲೂ ಸಹ ತನ್ನ ಹಿಂಬಾಲಕರಿಗೆ ಊಟವನ್ನು ಒದಗಿಸುತ್ತಾನೆ ಎಂಬುದನ್ನು ತಿಳಿಯಪಡಿಸುತ್ತವೆ.[6]

**ವಚನ 19.** ಯೇಸು **ಜನರಿಗೆ ಹುಲ್ಲಿನ ಮೇಲೆ ಕುಳಿತುಕೊಳ್ಳಲು ಸೂಚಿಸಿದನು.** ಈ ಕ್ರಮಬದ್ಧವಾದ ಕಾರ್ಯವನ್ನು ಆತನ ಶಿಷ್ಯರು ಮಾಡಿದರು (ಲೂಕ 9:14, 15). "ಕೆಳಗೆ ಕುತುಕೋ" (*anaklinō*) ಎಂಬ ಪದವನ್ನು ಹೆಚ್ಚು ಸ್ಪಷ್ಟವಾಗಿ "ಒರಗು" ಎಂದು ಅನುವಾದಿಸಬಹುದು, ಒಬ್ಬನು ಊಟಕ್ಕೆ ಕುಳಿತುಕೊಳ್ಳುವಂತೆ (8:11), ಹುಲ್ಲು ಹಸುರಾಗಿತ್ತು (ಮಾರ್ಕ 6:39). ಇದು ಪಸ್ಕ ಹಬ್ಬವು ಸಮೀಪವಾಗಿತ್ತು ಎಂಬ ಸತ್ಯವನ್ನು ದೃಢಪಡಿಸುತ್ತದೆ (ಯೋಹಾನ 6:4). "ಜನರು ಪಂಕ್ತಿಯಲ್ಲಿ ನೂರರಂತೆ ಐವತ್ತರಂತೆ ಸಾಲುಸಾಲಾಗಿ ಕೂತುಕೊಂಡರು" (ಮಾರ್ಕ 6:40). ಮಾರ್ಕನ ಸುವಾರ್ತೆಯಲ್ಲಿ "ಗುಂಪಿಗೆ" (ಪಂಕ್ತಿಗಳು) (*prasiai prasiai*) ನಿಜವಾಗಿಯೂ ಉಪಯೋಗಿಸಿದ, ಗುಂಪುಗುಂಪಾಗಿ, ಎಂಬ ವಾಕ್ಯಭಾಗ ಹುಲ್ಲಿನ ಮೇಲೆ ನೂರು ಮತ್ತು ಐವತ್ತರ ಗುಂಪಿನ ಕ್ರಮಬದ್ಧವಾದ ಸಾಲುಗಳು ತೋಟದ ಸ್ಥಳದಲ್ಲಿ ನಿರ್ಮಿತವಾದಂತೆ ಕಂಡುಬರುತಿತ್ತು ಎಂಬುದನ್ನು ತಿಳಿಸುತ್ತದೆ.

ಜನರು ಹುಲ್ಲಿನ ಮೇಲೆ ಕುಳಿತ ನಂತರ, ಯೇಸು ಅವರಿಗೆ ಆತಿಥ್ಯವನ್ನು ನೀಡುವವನಂತೆ ಊಟವನ್ನು ಬಡಿಸಿದನು. ಎಲ್ಲಾ ಜನರು ನೋಡುತ್ತಿರುವ ಹಾಗೆ **ಆತನು ಐದು ರೊಟ್ಟಿಗಳು ಮತ್ತು ಎರಡು ಮೀನುಗಳು** ತನ್ನ ಕೈಯಲ್ಲಿ ತೆಗೆದುಕೊಂಡನು. **ತರುವಾಯ ಆಕಾಶದ ಕಡೆಗೆ ನೋಡಿ, ಆಹಾರವನ್ನು ಆಶೀರ್ವದಿಸಿದನು.** ಪರಲೋಕದ ಕಡೆಗೆ ನೋಡಿ ಪ್ರಾರ್ಥನೆಯನ್ನು ಮಾಡುವದು ಯೆಹೂದಿಯರಲ್ಲಿ ಸಾಮಾನ್ಯವಾದ ವಿಧಾನವಾಗಿತ್ತು (ಕೀರ್ತನೆ 121:1; 123:1, 2; 141:8; ಲೂಕ 18:13; ಯೋಹಾನ 11:41; 17:1). "ಅವನು ಆಹಾರವನ್ನು ಆಶೀರ್ವದಿಸಿದನು" ಇದರ ಅರ್ಥ ಸರಳವಾಗಿ ಅದನ್ನು ನೀಡಿದ್ದಕ್ಕಾಗಿ ಯೇಸು ದೇವರಿಗೆ "ಸ್ತೋತ್ರ ಹೇಳಿದನು" ಎಂದು ಅರ್ಥವಾಗುತ್ತದೆ (NIV). ಆತನು ಪದಾರ್ಥಗಳಲ್ಲಿ ಯಾವುದೇ ಬದಲಾವಣೆಯನ್ನು ಮಾಡಲಿಲ್ಲ; ಕೇವಲ ಆತನು ಅದನ್ನು ದ್ವಿಗುಣಗೊಳಿಸಿದನು. ಯೆಹೂದಿಯರು ಸಂಪ್ರದಾಯಿಕವಾಗಿ ರೊಟ್ಟಿಯನ್ನು ಈ ರೀತಿಯಾಗಿ ಆಶೀರ್ವದಿಸುತ್ತಿದ್ದರು: "ಓ ಕರ್ತನಾದ ನಮ್ಮ ದೇವರೇ, ನಿನಗೆ ಸ್ತೋತ್ರ, ಸೃಷ್ಟಿಯ ಒಡೆಯನೆ, ಭೂಮಿಯಿಂದ ಆಹಾರವನ್ನು ನೀಡುವವನು ನೀನಾಗಿದ್ದೀ" ಎಂದರ್ಥವಾಗಿದೆ.[7]

ರೊಟ್ಟಿಗಳನ್ನು ಮುರಿದು ಮೀನುಗಳನ್ನು ತುಂಡು ತುಂಡಾಗಿ ಮಾಡಿದನು (ಮಾರ್ಕ 6:41). ಯೇಸು ಅವುಗಳನ್ನು ಶಿಷ್ಯರಿಗೆ ಕೊಟ್ಟನು, ಮತ್ತು ಶಿಷ್ಯರು ಜನಸಮೂಹಕ್ಕೆ ಹಂಚಿದರು. ಈ

ಘಟನೆಗೆ ಸಂಬಂಧಿಸಿರುವ ಅದ್ಭುತವನ್ನು ಸಂಕ್ಷೇಪಿಸಲಾಗಿದೆ. ರೊಟ್ಟಿ ಮತ್ತು ಮೀನನ್ನು ದ್ವಿಗುಣಗೊಳಿಸಿದ್ದು ವರ್ಣಿಸಲು ಕೆಲವೇ ಶಬ್ದಗಳನ್ನು ಉಪಯೋಗಿಸಲಾಗಿದೆ. William Hendriksen ರವರು ತಮ್ಮ ಅಭಿಪ್ರಾಯವನ್ನು ಈ ರೀತಿಯಾಗಿ ನೀಡುತ್ತಾರೆ, "ಅದ್ಭುತವು ವ್ಯಕ್ತಪಡಿಸಿರುವದಕ್ಕಿಂತ ಹೆಚ್ಚಾಗಿ ಅರ್ಥವಾಗುವಂತಿದೆ ಎಂದು ಹೇಳಬಹುದು."[8]

ವಿಭಿನ್ನವಾದ ಸನ್ನಿವೇಶದಲ್ಲಿ, ಭಾಷೆ ("ತೆಗೆದುಕೊಂಡು," "ಆಶೀರ್ವದಿಸಿ," "ಮುರಿದು," ಮತ್ತು "ಕೊಟ್ಟನು") ಇವು ಕರ್ತನ ಭೋಜನ ಸಂಸ್ಕಾರದ ದಾಖಲೆಗಳಿಗೆ ಹೋಲಿಕೆಯಾಗಿವೆ (26:26; ಮಾರ್ಕ 14:22; ಲೂಕ 22:19; 1 ಕೊರಿಂಥ 11:23, 24). ಯೇಸುವಿನ ವರ್ತನೆಯು ಪ್ರತಿದಿನ ಯೆಹೂದ ಕುಟುಂಬದ ತಂದೆ ನಿರ್ವಹಿಸುವ ಕಾರ್ಯವನ್ನು ಜ್ಞಾಪಿಸುತ್ತದೆ. ಆತನು ರೊಟ್ಟಿಯನ್ನು ತೆಗೆದುಕೊಂಡು, ಆಹಾರವನ್ನು ಕೊಟ್ಟಿರುವದಕ್ಕಾಗಿ ದೇವರಿಗೆ ಸ್ತೋತ್ರಮಾಡಿ, ರೊಟ್ಟಿಯನ್ನು ಮುರಿದು, ಪ್ರತಿಯೊಬ್ಬರಿಗೆ ಒಂದೊಂದು ತುಂಡನ್ನು ತಿನ್ನುವದಕ್ಕೆ ಕೊಡುತ್ತಾನೆ.[9]

**ವಚನ 20. ಅವರೆಲ್ಲರು ಊಟಮಾಡಿ ತೃಪ್ತರಾದರು.** ಅವರಿಗೆ ಬೇಕಾದಷ್ಟು ಊಟವನ್ನು ಮಾತ್ರ ನೀಡಲಿಲ್ಲ ಆದರೆ ಅವರು ತಮ್ಮ ಸಾಮರ್ಥ್ಯಕ್ಕೆ ತಕ್ಕಹಾಗೆ ತಿಂದು ತೃಪ್ತರಾದರು. ಇದು ಪ್ರಾಚೀನ ಮೆಡಿಟೇರಿಯನ್ ಪ್ರದೇಶದಲ್ಲಿ ಸಾಕಷ್ಟು ಆಹಾರವನ್ನು ಒದಗಿಸಿ ಅವರು ತಮಗೆ ಬೇಕಾದಷ್ಟು ತಿನ್ನುವದು ಮಾತ್ರವಲ್ಲ ತಿಂದು ಬಿಟ್ಟ ಮೇಲೆ ಉಳಿಯುವಂತೆ ಒದಗಿಸುವವನು ಒಬ್ಬ ಉತ್ತಮ ಆತಿಥ್ಯವನ್ನು ನೀಡುವವನಾಗಿದ್ದಾನೆ ಎಂಬುದು ಸಾಮಾನ್ಯವಾದ ನಂಬಿಕೆಯಾಗಿತ್ತು.[10] ಯೋಹಾನ 6:12 "ಅವರು ತೃಪ್ತಿರಾದ ಮೇಲೆ ಯೇಸು ತನ್ನ ಶಿಷ್ಯರಿಗೆ - ಮಿಕ್ಕ ತುಂಡುಗಳನ್ನು ಕೊಡಿಸಿರಿ; ಇದರಲ್ಲಿ ಯಾವದೂ ವ್ಯರ್ಥವಾಗಬಾರದು" ಎಂದು ಹೇಳಿದನು. ಅವರು ತಿಂದು ಮಿಕ್ಕ ತುಂಡುಗಳನ್ನು ಕೂಡಿಸಲಾಗಿ ಅದು ಹನ್ನೆರಡು ಪುಟ್ಟಿಗಳು ತುಂಬಿದವು.

ಇಲ್ಲಿ "ಪುಟ್ಟಿಗಳಿಗೆ" (*kophinos*) ಉಪಯೋಗಿಸಿದ ಪದ ನಾಲ್ಕು ಸಾವಿರ ಜನರಿಗೆ ಊಟಮಾಡಿಸಿದ ಸಂದರ್ಭದಲ್ಲಿ ಉಪಯೋಗಿಸಿದ ಶಬ್ದಕ್ಕಿಂತ ಭಿನ್ನವಾಗಿದೆ (15:37). ಇಲ್ಲಿ ಉಪಯೋಗಿಸಿದ ಪದ ಯೆಹೂದ್ಯರು ಪ್ರಯಾಣ ಮಾಡುವಾಗ ಅನ್ಯರಿಂದ ರೊಟ್ಟಿಯನ್ನು ತೆಗೆದುಕೊಳ್ಳುವದನ್ನು ತಡೆಗಟ್ಟಲು ರೊಟ್ಟಿಯನ್ನು ತೆಗೆದುಕೊಂಡು ಹೋಗುವ ಸಣ್ಣ ಪುಟ್ಟಿ ಎಂದಾಗುತ್ತದೆ.[11] ಯೇಸು ನಾಲ್ಕು ಸಾವಿರ ಜನರಿಗೆ ಊಟಮಾಡಿಸಿದ ಕಥೆಯಲ್ಲಿ ಉಪಯೋಗಿಸಿದ "ಬುಟ್ಟಿಗಳು" (*spuris*) ಎಂಬ ಪದವು ಒಬ್ಬ ಮನುಷ್ಯನನ್ನು ಹಿಡಿಯಬಹುದಾದ ವಿಶಾಲವಾದ ಬುಟ್ಟಿ ಎಂದು ಅರ್ಥವಾಗುತ್ತದೆ, ಕ್ರೈಸ್ತರು ಪೌಲನನ್ನು ದಮಸ್ಕದ ಗೋಡೆಯಿಂದ ಇಳಿಸಲು ಉಪಯೋಗಿಸಿದ ಬುಟ್ಟಿ (ಅಪೊಸ್ತಲರ ಕೃತ್ಯಗಳು 9:25). ಹಾಗಿದ್ದರೂ, Leon Morris ರವರು ಈ ರೀತಿಯಾಗಿ ವಾದಿಸುತ್ತಾರೆ ಬುಟ್ಟಿಯ ಅಳತೆಗಿಂತ ಬುಟ್ಟಿಯಲ್ಲಿರುವ ಪದಾರ್ಥಗಳಿಗೆ ಉಪಯೋಗಿಸಿದ ಪದಗಳು ವಿಭಿನ್ನವಾಗಿರುತ್ತವೆ. ಅವನ ತೀರ್ಪು ಹೀಗಿದೆ *kophinos* ಎನ್ನುವ ಈ ಬುಟ್ಟಿಗಳು ಬಹಳ ಗಟ್ಟಿಯಾಗಿದ್ದವು, ಬಹುಶಃ ಚಾಪೆ ಹೆಣೆಯುವ ಕಡ್ಡಿಯಂತೆ ಅದೇ ರೀತಿಯಾಗಿ *spuris* ಇದು ಸಣಬಿನ ನಾರಿನಿಂದ ಮಾಡಿರುವಂತದ್ದು ಅಥವಾ ಅದೇ ರೀತಿಯ ವಸ್ತುವಿನಿಂದ ಮಾಡಿರುವಂತದ್ದು ಮತ್ತು ಇದು ಬಹಳ ಮೆದುವಾಗಿರುತ್ತದೆ.[12]

"ಹನ್ನೆರಡು" ಎಂಬ ಸಂಖ್ಯೆ ಇಸ್ರಾಯೇಲ್ಯರ ಹನ್ನೆರಡು ಕುಲಗಳನ್ನು ಮತ್ತು ಹನ್ನೆರಡು ಜನ ಅಪೊಸ್ತಲರನ್ನು ಜ್ಞಾಪಕಕ್ಕೆ ತರುತ್ತದೆ. ಅವರ ಮುಂದಿರುವ ಜನಸಮೂಹವು ಹೊಸ ಇಸ್ರಾಯೇಲನ್ನು ಪ್ರತಿನಿಧಿಸುವಂತೆ ಊಹಿಸಬಹುದು. ದೇವರು ಅರಣ್ಯದಲ್ಲಿ ಇಸ್ರಾಯೇಲರಿಗೆ ಅದ್ಭುತವಾಗಿ ಊಟವನ್ನು ನೀಡಿದಂತೆ, ಯೇಸುವು ಸಹ ಈ ನಿರ್ಜನ ಪ್ರದೇಶದಲ್ಲಿ ಹೊಸ ಇಸ್ರಾಯೇಲರಿಗೆ ಊಟ ಮಾಡಿಸಿದನು. ಉಳಿದ ತುಂಡುಗಳು ಅದ್ಭುತದಲ್ಲಿರುವ ತೃಪ್ತಿಯನ್ನು ತೋರಿಸುತ್ತದೆ. ಉಳಿದ ತುಂಡುಗಳನ್ನು ಶೇಖರಿಸಿದ ನಂತರ, ಯೇಸು ತನ್ನ ಶಿಷ್ಯರಿಗೆ

ದೇವರ ಆಶೀರ್ವಾದವನ್ನು ದುಂದುಮಾಡಬಾರದು ಎಂದು ಎಚ್ಚರಿಸುತ್ತಾನೆ (ನೋಡಿರಿ ಲೂಕ 15:13).

**ವಚನ 21.** ಆ ದಿನದಲ್ಲಿ ಸೇರಿದ ಜನ ಸಮೂಹವು ಅಪರಿಮಿತವಾಗಿತ್ತು: **ಊಟಮಾಡಿದವರು ಹೆಂಗಸರೂ ಮಕ್ಕಳೂ ಅಲ್ಲದೆ ಗಂಡಸರೇ ಹೆಚ್ಚು ಕಡಿಮೆ ಐದು ಸಾವಿರ ಮಂದಿ.** ಕೇವಲ ಗಂಡಸರನ್ನು ಮಾತ್ರ ಎಣಿಕೆ ಮಾಡುವದು ಹಿಂದಿನ ಕಾಲದಲ್ಲಿ ಸಾಮಾನ್ಯ ವಾಗಿತ್ತು. ಅರಣ್ಯಕಾಂಡದಲ್ಲಿ, ಇಪ್ಪತ್ತು ವರ್ಷದ ಪುರುಷರು ಮತ್ತು ಸೈನ್ಯದಲ್ಲಿ ಹೋರಾಡಲು ಶಕ್ತರಾದ ಪುರುಷರನ್ನು ಖಾನೇಷುಮಾರಿಯಲ್ಲಿ ಎಣಿಕೆಮಾಡಲಾಯಿತು (ಅರಣ್ಯಕಾಂಡ 1:2, 3). ಯೇಸು ಐದು ಸಾವಿರ ಗಂಡಸರಿಗೆ ಊಟ ಮಾಡಿಸಿದನು, ಅದು ಹೆಚ್ಚು ಕಡಿಮೆ ರೋಮನ್ನರ ಸೈನ್ಯದಳದ ಅಳತೆಯಷ್ಟಿತ್ತು. ಆತನ ಕೃತ್ಯಗಳನ್ನು - ಹಸಿದವರಿಗೆ ಊಟ ಬಡಿಸುವದು ಮತ್ತು ರೋಗಿಗಳನ್ನು ಸ್ವಸ್ಥಮಾಡುವದು - ಯುದ್ಧದಲ್ಲಿ ಒಂದು ದೊಡ್ಡ ಆಸ್ತಿ ಎಂದು ಅರ್ಥೈಸಿದರು. ಅವರ ಮನಸ್ಥಿತಿಯಲ್ಲಿ ಅವರು ಆತನನ್ನು "ಒತ್ತಾಯ ಪೂರ್ವಕವಾಗಿ ಅರಸನನ್ನಾಗಿ ಮಾಡುವಂತೆ ಕಾಣುತಿತ್ತು" (ಯೋಹಾನ 6:15).

## ಪಾಠಗಳು

## ಐದು ಸಾವಿರ ಜನರಿಗೆ ಊಟ ಮಾಡಿಸಿದ್ದು (14:15-21)

ಕೆಲವು ವಿಮರ್ಶಾತ್ಮಕ ಪಂಡಿತರು ಐದು ಸಾವಿರ ಜನರಿಗೆ ಊಟಮಾಡಿಸಿದ್ದು ಮತ್ತು ನಾಲ್ಕು ಸಾವಿರ ಜನರಿಗೆ ಊಟಮಾಡಿಸಿದ್ದು ಇದು ಒಂದೇ ಕಥೆಯ ಎರಡು ಪ್ರಸ್ತಾಪಗಳಾಗಿವೆ ಎಂದು ಅಭಿಪ್ರಾಯಪಡುತ್ತಾರೆ. ಅದು ಹೇಗೋ ದೂಷಿತವಾಗಿದೆ ಎಂದು ಹೇಳುತ್ತಾರೆ. ಎರಡು ಅದ್ಭುತಗಳನ್ನು ಹತ್ತಿರದಿಂದ ಅಧ್ಯಯನ ಮಾಡಿದಾಗ ಇದು ನಿಜವಲ್ಲ ಎಂಬುದನ್ನು ಸಿದ್ಧಾಂತಪಡಿಸುತ್ತದೆ.

1. *ವಿಭಿನ್ನ ಸನ್ನಿವೇಶಗಳು.* ಎರಡು ಅದ್ಭುತ ಕಾರ್ಯಗಳ ನಡುವೆ ಎಷ್ಟು ಸಮಯ ಕಳೆದುಹೋಗಿರಬಹುದು ನಮಗೆ ಗೊತ್ತಿಲ್ಲ, ಆದರೆ ಅವೆರಡು ಪ್ರತ್ಯೇಕ ಸಂದರ್ಭಗಳಾಗಿವೆ. ತನ್ನ ಶಿಷ್ಯರಿಗೆ, "ಫರಿಸಾಯರ ಮತ್ತು ಸದ್ದುಕಾಯರ ಹುಳಿ ಹಿಟ್ಟಿನ ವಿಷಯದಲ್ಲಿ," ಎಚ್ಚರಿಕೆ ನೀಡುವಾಗ ಯೇಸು ಸ್ಪಷ್ಟವಾಗಿ ಎರಡು ಘಟನೆಗಳನ್ನು ಬೇರ್ಪಡಿಸಿದ್ದಾನೆ (16:9, 10).

2. *ವಿಭಿನ್ನ ಸ್ಥಳಗಳು.* ಐದು ಸಾವಿರ ಜನರಿಗೆ ಊಟ ಮಾಡಿಸಿರುವ ಸ್ಥಳವು ಬೇತ್ಸಾಯಿದೆ (ಲೂಕ 9:10) ಮತ್ತು ಅದರಲ್ಲಿ ತೊಡಗಿಸಿಕೊಂಡವರು ಹೆಚ್ಚಾಗಿ ಗಲಿಲಾಯದ ಯೆಹೂದ್ಯರು. ನಾಲ್ಕು ಸಾವಿರ ಜನರಿಗೆ ಊಟ ಮಾಡಿಸಿದ್ದು ದೆಕಪೊಲಿಯಲ್ಲಿ ನಡೆದಿರುತ್ತದೆ (ಮಾರ್ಕ 7:31; 8:1-9). ಆ ಕ್ಷೇತ್ರವು ಅನ್ಯರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದದರಿಂದ, ಈ ಘಟನೆಯಲ್ಲಿ ಹೆಚ್ಚಾಗಿ ಯೆಹೂದ್ಯರಲ್ಲದವರು ಭಾಗವಹಿಸಿದ್ದರು.

3. *ವಿಭನ್ನ ಸಮಯ.* ಒಂದು ದಿವಸ ಐದು ಸಾವಿರ ಜನರು ಯೇಸುವಿನೊಂದಿಗೆ ಇದ್ದರು (14:15, 23), ನಾಲ್ಕು ಸಾವಿರ ಜನರು ಆತನೊಂದಿಗೆ ಮೂರು ದಿವಸ ಇದ್ದರು (15:32).

4. *ವಿಭಿನ್ನ ಗಾತ್ರದ ಆಹಾರ.* ಯೇಸು ಮೊದಲಿನ ಅದ್ಭುತ ಕಾರ್ಯದಲ್ಲಿ ಐದು ಜವೆ ಗೋದಿಯ ರೊಟ್ಟಿ ಎರಡು ಮೀನಿನೊಂದಿಗೆ ಕಾರ್ಯನಿರ್ವಹಿಸಿದನು (ಯೋಹಾನ 6:9). ಎರಡನೆಯ ಅದ್ಭುತ ಕಾರ್ಯದ ಮೊದಲು, ಏಳು ರೊಟ್ಟಿಗಳು ಮತ್ತು ಕೆಲವು ಚಿಕ್ಕ ಮೀನುಗಳನ್ನು ಕಂಡುಕೊಂಡರು (15:34). ಎಲ್ಲರೂ ಊಟಮಾಡಿದ ನಂತರ ಉಳಿದ ಮಿಕ್ಕ ತುಂಡುಗಳಲ್ಲಿಯೂ ಸಹ ವ್ಯತ್ಯಾಸವನ್ನು ಕಾಣುತ್ತೇವೆ. ಮೊದಲನೆಯ ಅದ್ಭುತ ಕಾರ್ಯದ ನಂತರ ಉಳಿದ ತುಂಡುಗಳು ಹನ್ನೆರಡು ಪುಟ್ಟಿಗಳು (14:20); ಆದರೆ ಎರಡನೆಯ ಅದ್ಭುತದ ಕಾರ್ಯದ ನಂತರ ಏಳು ದೊಡ್ಡ ಬುಟ್ಟಿಗಳಲ್ಲಿ ಸಂಗ್ರಹಿಸಿದ್ದರು (15:37).

ಮತ್ತಾಯ ಮತ್ತು ಮಾರ್ಕನ ಸುವಾರ್ತೆ ಎರಡು ಅದ್ಭುತಗಳನ್ನು ದಾಖಲಿಸುತ್ತವೆ.

ಬರಹಗಾರರು ಒಂದೇ ಘಟನೆಯನ್ನು ಎರಡು ಬಾರಿ ಏಕೆ ದಾಖಲಿಸಿದ್ದಾರೆ? ಅವರು ಪವಿತ್ರಾತ್ಮನಿಂದ ಮಾರ್ಗದರ್ಶನ ಹೊಂದಿದ್ದರಿಂದ, ಅವರು ಪ್ರತಿಯೊಂದು ಅದ್ಭುತಗಳ ಸತ್ಯವನ್ನು ಬರೆದಿದ್ದಾರೆ.

*ನಾವು ಏನು ಮಾಡಬೇಕು?* ಯೇಸು ಐದು ಸಾವಿರ ಜನರಿಗೆ ಊಟ ಮಾಡಿಸಿದ್ದರಿಂದ ನಾವು ಏನು ಕಲಿಯುತ್ತೇವೆ? ಇಲ್ಲಿ ನಾಲ್ಕು ಉತ್ತಮವಾದ ಪಾಠಗಳಿವೆ. (1) ನಾವು ನಮ್ಮಲ್ಲಿರುವದನ್ನು ಉಪಯೋಗಿಸಬೇಕು. ಐದು ರೊಟ್ಟಿ ಎರಡು ಮೀನು ಜನಸಮೂಹಕ್ಕೆ ಬಹಳವೇನಲ್ಲ, ಆದರೆ ಯೇಸು ಅತ್ಯಲ್ಪವಾದ ಒದಗಿಸುವಿಕೆಯಿಂದ ಹೆಚ್ಚಾಗಿ ಗುರುತಿಸಲ್ಪಡುವ ಅದ್ಭುತಕಾರ್ಯವನ್ನು ಮಾಡಿದನು. (2) ನಾವು ಕೊಡುವದಕ್ಕೆ ನಮ್ಮಲ್ಲಿರುವದನ್ನು ಕೊಡಲು ಸಿದ್ಧರಾಗಿರಬೇಕು. ಅಂದ್ರೇಯನು ಇಷ್ಟು ಅಲ್ಪವಾದದ್ದು ಹೇಗೆ ಇಷ್ಟೊಂದು ಜನರಿಗೆ ಸಾಕಾಗಬಹುದು ಎಂದು ಆಶ್ಚರ್ಯಪಟ್ಟನು. ದೇವರು ಯಾವುದೇ ಅವಶ್ಯಕತೆಯನ್ನು ಪೂರೈಸಲು ಶಕ್ತನಾಗಿದ್ದಾನೆ. ನಾವು ನಮಗೆ ಏನೂ ಇಲ್ಲ ಎಂದು ಯೋಚಿಸುವಾಗ, ದೇವರು ಏನನ್ನಾದರೂ ಯೋಚಿ ಸುತ್ತಿರಬಹುದು! ನಂಬಿಕೆ ಕಣ್ಣಿಗೆ ಕಾಣದಿರುವದನ್ನು ನೋಡುವದಾಗಿದೆ ಗ್ರಹಿಸಲು ಅಸಾಧ್ಯವಾದವುಗಳನ್ನು ನಂಬಿರಿ ಮತ್ತು ಅಸಾಧ್ಯವಾದವುಗಳನ್ನು ಹೊಂದಿಕೊಳ್ಳಿರಿ. (3) ನಾವು ನಮ್ಮ ಕರ್ತನ ಆಜ್ಞೆಗಳನ್ನು ತಿಳಿದುಕೊಳ್ಳದೇ ಹೋದರು ವಿಧೇಯರಾಗಬೇಕು. ಲಭ್ಯವಿರುವ ಆಹಾರವನ್ನು ಪರಿಗಣಿಸಿ, ಯೇಸು ಜನರಿಗೆ ಪಂಕ್ತಿಪಂಕ್ತಿಯಾಗಿ ನೆಲದ ಮೇಲೆ ಕುಳಿತುಕೊಳ್ಳಲು ಆಜ್ಞೆ ಮಾಡಿರಿ ಎಂದು ಹೇಳಿದಾಗ ಶಿಷ್ಯರು ಇದು ವಿಚಿತ್ರವಾಗಿದೆ ಎಂದು ಯೋಚಿಸಿದರು. ಯಾವುದು ಅಸಾಧ್ಯವೆಂದು ತೋರುತ್ತದೋ ಅದು ದೇವರಿಗೆ ಸಾಧ್ಯವಾ ಗುತ್ತದೆ. (4) ದೇವರ ಆಶೀರ್ವಾದವನ್ನು ವ್ಯರ್ಥಮಾಡಬಾರದು. ಉಳಿದ ಆಹಾರವನ್ನು ಕೂಡಿಸಲಾಗಿತ್ತು. ಯಾವುದನ್ನು ಬಿಸಾಡಬಾರದು, ನಮ್ಮ ಕರ್ತನು ಕಾಪಾಡುವದು ಅವಶ್ಯವಾಗಿದೆ ಎನ್ನುವಾಗ ನಾವು ಅದರಂತೆ ಮಾಡಬಾರದೋ?

## ಸಾಮಾನ್ಯವಾದದ್ದರ ಮಹಿಮೆ (14:17)

ದೇವರು ನಾವು ಸಾಮಾನ್ಯ ಎಂದು ಪರಿಗಣಿಸುವ ವಸ್ತುಗಳನ್ನು ಉಪಯೋಗಿಸುವದರ ಮೂಲಕ ತನಗೆ ಮಹಿಮೆಯನ್ನು ತರಬಹುದು. ವಿಮೋಚನಕಾಂಡದಲ್ಲಿ, ಯೇಸು ಒಂದು ಸಾಮಾನ್ಯ ಕೋಲನ್ನು ಮೋಶೆಯ ಕೈಯಲ್ಲಿ ಐಗುಪ್ತದ ಮೇಲೆ ಭಾದೆಗಳನ್ನು ತರಲು ಮತ್ತು ಕೆಂಪು ಸಮುದ್ರವನ್ನು ಇಬ್ಭಾಗ ಮಾಡಲು, ತನ್ನ ಜನರಿಗೆ ಬಿಡುಗಡೆ ತರಲು ಉಪಯೋಗಿ ಸಿದನು (ವಿಮೋಚನಕಾಂಡ 4:1-3; 7:17; 8:5, 16; 9:23; 10:13; 14:16). ನ್ಯಾಯಸ್ಥಾಪಕರಲ್ಲಿ, ಆತನು ಸಾಮಾನ್ಯ ಕೊಂಬನ್ನು, ಉರಿಯುವ ಪಂಜು ಬಲಿಕೊಡವನ್ನು ಮುನ್ನೂರು ಮಂದಿಯ ಕೈಯಲ್ಲಿ ಮಿದ್ಯಾನ್ಯರ ಸಮೂಹವನ್ನು ಸೋಲಿಸುವದಕ್ಕೆ ಉಪಯೋಗಿ ಸಿದನು (ನ್ಯಾಯಸ್ಥಾಪಕ 7:16, 22).

ಸುವಾರ್ತೆಗಳಲ್ಲಿ, ಒಬ್ಬ ಚಿಕ್ಕ ಹುಡುಗನ ಸಾಮಾನ್ಯ ಊಟವನ್ನು ದೊಡ್ಡ ಜನಸಮೂಹಕ್ಕೆ ಊಟಬಡಿಸಲು ಯೇಸು ಉಪಯೋಗಿಸಿದನು (14:17; ಯೋಹಾನ 6:9). ಇಂದು ನಾವು ಸಾಮಾನ್ಯವಾದದ್ದೆಂದು ಪರಿಗಣಿಸಲ್ಪಡುವ ಮತ್ತು ಅದನ್ನು ಆತನ ಮಹಿಮೆಗಾಗಿ ಉಪಯೋಗಿ ಸಲು ಏನನ್ನು ಹೊಂದಿಕೊಂಡಿದ್ದೇವೆ? ನಾವು ಕ್ರಿಸ್ತನಿಗೆ ಈ ಸಂಗತಿಗಳನ್ನು ಆತನ ನಾಮಕ್ಕೆ ಮಹಿಮೆತರುವದಕ್ಕಾಗಿ ಉಪಯೋಗಿಸಲು ಅನುಮತಿಸುತ್ತೇವೆಯೋ?

David Stewart

ಟಿಪ್ಪಣಿಗಳು

[1]Josephus *Antiquities* 18.2.1; *Wars* 2.9.1; 3.10.7; *Life* 72. [2]Robert H. Mounce, *Matthew,* New International Biblical Commentary (Peabody, Mass.: Hendrickson Publishers, 1991), 142. [3]*2 Baruch* 29.8. [4]ಯೇಸು ಐದು ಸಾವಿರ ಜನರಿಗೆ ಊಟ ಮಾಡಿಸಿರುವದಕ್ಕೆ ಹಳೆ ಒಡಂಬಡಿಕೆಯಲ್ಲಿ ಸಮವಾಗಿರುವ ಘಟನೆ ದೇವರು ಎಲೀಯನಿಗೆ (1 ಅರಸುಗಳು 17:9-16) ಮತ್ತು ಎಲೀಷನಿಗೆ ನೂರು ಜನರಿಗೆ ಊಟ ಮಾಡಿಸಲು ಆಹಾರವನ್ನು ಕೊಟ್ಟನು (2 ಅರಸುಗಳು 4:42-44). [5]Leon Morris, *The Gospel According to Matthew,* Pillar Commentary (Grand Rapids, Mich.: Wm. B. Eerdmans Publishing Co., 1992), 375. [6]Douglas R. A. Hare, *Matthew,* Interpretation (Louisville: John Knox Press, 1993), 166. [7]Mishnah *Berakoth* 6.1. [8]William Hendriksen, *New Testament Commentary: Exposition of the Gospel According to Matthew* (Grand Rapids, Mich.: Baker Book House, 1973), 596. [9]David Hill, *The Gospel of Matthew,* The New Century Bible Commentary (Grand Rapids, Mich.: Wm. B. Eerdmans Publishing Co., 1972), 246. [10]Craig S. Keener, *A Commentary on the Gospel of Matthew* (Grand Rapids, Mich.: Wm. B. Eerdmans Publishing Co., 1999), 405; ನೋಡಿರಿ Plutarch *Moralia* 279E; 702D–704B.

[11]Juvenal *Satires* 3.14; 6.542; ನೋಡಿರಿ Mishnah *Sotah* 2.1. [12]Leon Morris, *The Gospel According to John,* The New International Commentary on the New Testament (Grand Rapids, Mich.: Wm. B. Eerdmans Publishing Co., 1971), 345, n. 25.